ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/20/ಇಸಿಎಸ್(1)/2024

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
email:dte.commissioner@gmail.com
ದಿನಾಂಕ : 30.05.2024

**ಜ್ಞಾಪನ**

ವಿಷಯ: ಮೇ-2024 ರ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಕ್ಕೆ ಸ್ಕೀಂ ಆಫ್ ವ್ಯಾಲ್ಯುಯೇಷನ್ ಮತ್ತು ಮಾದರಿ ಉತ್ತರಗಳನ್ನು ಸಿದ್ಧಪಡಿಸುವ ಮತ್ತು ಪರಿಶೀಲಿಸಿ ದೃಢೀಕರಿಸುವ ಬಗ್ಗೆ.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮೇ-2024 ರ ಡಿಪ್ಲೋಮ ಸೆಮಿಸ್ಟರ್ C-03, C-09 & C-15ಮತ್ತುC-20 ಪಠ್ಯಕ್ರಮಗಳ ಥಿಯರಿ ಪರೀಕ್ಷೆಗಳು ದಿನಾಂಕ:31.05.2024ರಂದು ಮುಕ್ತಾಯಗೊಳ್ಳಲಿದ್ದು, ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯವನ್ನು ಬೆಂಗಳೂರು ಮೌಲ್ಯಮಾಪನ ಕೇಂದ್ರದಲ್ಲಿ ನಡೆಸಲು ಕ್ರಮವಹಿಸಲಾಗಿದೆ. ಮೌಲ್ಯಮಾಪನ ಕಾರ್ಯವು ಸಮರ್ಪಕವಾಗಿ ಜರುಗಲು ಸ್ಕೀಂ ಆಫ್ ವ್ಯಾಲ್ಯುಯೇಷನ್ ಮತ್ತು ಮಾದರಿ ಉತ್ತರಗಳ ಅವಶ್ಯಕತೆ ಇರುತ್ತದೆ.

ಆದ್ದರಿಂದ ಸಂಬಂಧಪಟ್ಟ ಪರೀಕ್ಷಕರ ಸಮಿತಿಗಳ ಅಧ್ಯಕ್ಷರು/ ಸದಸ್ಯರುಗಳು C-03,C-09,C-15 & C-20 ಪಠ್ಯಕ್ರಮಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಆಯ್ಕೆಯಾಗಿ ಮುದ್ರಣಗೊಂಡಿರುವ ಪ್ರಶ್ನೆಪತ್ರಿಕೆಗಳ ರಚನಾಕಾರರ ವಿವರಗಳನ್ನು ತಮ್ಮ BTELinx Login ನಿಂದ/ ಶ್ರೀ ಹರೀಶ ಶೆಟ್ಟಿ, ಪ್ರಿನ್ಸಿಪಾಲರು, ಕರ್ನಾಟಕ (ಸ) ಪಾಲಿಟೆಕ್ನಿಕ್, ಮಂಗಳೂರು ಇವರ Help Desk ತಂಡವನ್ನು ಸಂಪರ್ಕಿಸಿ, ಪಡೆದು ರಚನಾಕಾರರಿಗೆ ಪ್ರಶ್ನೆಪತ್ರಿಕೆ ಪ್ರತಿಗಳನ್ನು ನೀಡಿ, ಸಂಬಂಧಪಟ್ಟ ಪ್ರಶ್ನೆಪತ್ರಿಕೆ ರಚನಾಕಾರರಿಂದ (C-03,C-09&C-15 ಮತ್ತು C-20ಪಠ್ಯಕ್ರಮಗಳ) ಮಾದರಿ ಉತ್ತರಗಳು & ಸ್ಕೀಂ ಆಫ್ ವ್ಯಾಲ್ಯುಯೇಷನ್‌ಗಳನ್ನು ಪಡೆಯಲು ಕ್ರಮವಹಿಸುವಂತೆ ಪರೀಕ್ಷಕರ ಸಮಿತಿಗಳ ಅಧ್ಯಕ್ಷರು/ ಸದಸ್ಯರುಗಳಿಗೆ ಸೂಚಿಸಲಾಗಿದೆ.

ತದನಂತರ ಸದರಿ ಸ್ಕೀಂ ಆಫ್ ವ್ಯಾಲ್ಯುಯೇಷನ್ ಮತ್ತು ಮಾದರಿ ಉತ್ತರಗಳನ್ನು ಪರಿಶೀಲಿಸಿ ದೃಢೀಕರಿಸಲು ತಾಂತ್ರಿಕ ಪರೀಕ್ಷಾ ಮಂಡಳಿಯಲ್ಲಿ ದಿನಾಂಕ: 04.06.2024 & 05.06.2024 ರಂದು ವಿವಿಧ ಪರೀಕ್ಷಕರ ಸಮಿತಿಯ ಅಧ್ಯಕ್ಷರುಗಳು/ ಸದಸ್ಯರುಗಳ ಸಭೆಯನ್ನು ಕರೆಯಲಾಗಿದ್ದು, ತಪ್ಪದೇ ಹಾಜರಾಗಲು ತಿಳಿಸಲಾಗಿದೆ.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ

ಇವರಿಗೆ,
ಸಂಬಂಧಪಟ್ಟ ಪರೀಕ್ಷಕರ ಸಮಿತಿಯ ಅಧ್ಯಕ್ಷರುಗಳು/ ಸದಸ್ಯರುಗಳು- ಮಾಹಿತಿ ಮತ್ತು ಅಗತ್ಯಕ್ರಮಕ್ಕಾಗಿ

ಪ್ರತಿ
ಶ್ರೀ ಹರೀಶ ಶೆಟ್ಟಿ, ಪ್ರಿನ್ಸಿಪಾಲರು, ಕರ್ನಾಟಕ (ಸ) ಪಾಲಿಟೆಕ್ನಿಕ್, ಮಂಗಳೂರು – ಮಾಹಿತಿ ಮತ್ತು ಅಗತ್ಯಕ್ರಮಕ್ಕಾಗಿ

Scanned with OKEN Scanner